Bapuji Educational Association (R.)
# R.L. Law College
Akkamahadevi Road, P.J. Extension, DAVANGERE – 2 (Karnataka)
Affiliated to Karnataka State Law University, Hubli. Recognised by the Bar Council of India – New Dehli.
NAAC Accredited – 'B+'
ಆರ್.ಎಲ್. ಕಾನೂನು ಕಾಲೇಜು
ಅಕ್ಕಮಹಾದೇವಿ ರಸ್ತೆ, ಪಿ.ಜೆ. ಬಡಾವಣೆ,ದಾವಣಗೆರೆ– 2
Office: 08192 – 250237
Website: WWW.rllcdvg.org
Email: rllc_dvg@yahoo.com

**Ref. No. RLLC/** **Date :02/05/2026**

## INERNSHIP ACTIVITY:

## SUBJECT:BELGAVI CENTRAL PRISON VISIT

## Activity Report

Students from **R.L. Law College** visited **Hindalga Central Prison** in Belagavi on 25 April 2026 as part of an experiential learning and internship initiative. This visit allowed students to gain practical insights into the Indian correctional system and the legal realities of incarceration.

The educational tour and internship visit to **Hindalga Central Prison** on 25 April 2026 was coordinated by **Sri Vidyadhara Vedha Varma T** and **Dr. Pankaja T C**, Assistant Professors at **R.L. Law College**. The visit was conducted under the guidance and direction of the Principal, **Prof. Basavanagouda B. P** and Director **Dr. M Somashekarappa.**

## Visit Highlights and Objectives

The program is designed to bridge the gap between classroom theory and real-world legal application

- **Correctional Insights:** Students explored the prison's administration, including its classification systems and specialized facilities like the library and video conference court for legal proceedings.

- **Prisoner Rights:** The visit included a seminar on the legal rights of inmates and the systemic challenges within the prison framework.

- **Practical Training:** This activity aligns with the college's focus on clinical courses, providing exposure to criminal law, court procedures, and human rights advocacy.

# LETTERS OF CORRESPONDENCE

ದಿನಾಂಕ: – 09.04.2026

ಬಾಪೂಜಿ ವಿದ್ಯಾಸಂಸ್ಥೆ (ರಿ.)

ಆರ್.ಎಲ್.ಕಾನೂನು ಕಾಲೇಜು, ದಾವಣಗೆರೆ–577002

R L LAW COLLEGE DAVANGERE

## ಸೂಚನೆ

ಈ ಮೂಲಕ 6ನೇ ಸೆಮಿಸ್ಟರ್ 3 ವರ್ಷದ ಎಲ್ಎಲ್.ಬಿ., ಹಾಗೂ 10 ನೇ ಸೆಮಿಸ್ಟರ್ 5 ವರ್ಷದ ಬಿ.ಎ.ಎಲ್ಎಲ್.ಬಿ., ವಿದ್ಯಾರ್ಥಿಗಳಿಗೆ ತಿಳಿಯಪಡಿಸುವುದೇನೆಂದರೆ, ದಿನಾಂಕ 25.04.2026 ರ ಶನಿವಾರದಂದು ಬೆಳಗಾವಿಯ ಕೇಂದ್ರ ಕಾರಾಗೃಹ ಭೇಟಿಗೆ ಅನುಮತಿ ಪಡೆಯಲಾಗಿದ್ದು, ಈ ಕುರಿತಂತೆ ಮಾಹಿತಿ ನೀಡಲು ಹಾಗೂ ವಿಚಾರ ವಿನಿಮಯ ಮಾಡಿಕೊಳ್ಳಲು ದಿನಾಂಕ 10.04.2026 ರಂದು ಮಧ್ಯಾಹ್ನ 12 ಗಂಟೆಗೆ ರೆಫ್ರೆನ್ಸ್ ಹಾಲ್‌ನಲ್ಲಿ ಸಭೆ ಕರೆಯಲಾಗಿದೆ. ಆಸಕ್ತ ವಿದ್ಯಾರ್ಥಿಗಳು ಸಭೆಗೆ ಹಾಜರಾಗಲು ಸೂಚಿಸಲಾಗಿದೆ.

ಪ್ರಾಂಶುಪಾಲರು
ಆರ್.ಎಲ್.ಕಾನೂನು ಕಾಲೇಜು
ದಾವಣಗೆರೆ.

---

ಬಾಪೂಜಿ ವಿದ್ಯಾಸಂಸ್ಥೆ(ರಿ.)

ಆರ್.ಎಲ್.ಕಾನೂನು ಕಾಲೇಜು,

2 ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ–577 002

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ ಇವರಿಂದ ಸಂಯೋಜಿತಗೊಂಡಿದೆ, ಬಾರ್ ಕೌನ್ಸಿಲ್ ಆಫ್ ಇಂಡಿಯಾ ನವದೆಹಲಿ ಇವರಿಂದ ಮಾನ್ಯತೆ ಪಡೆಯಲಾಗಿದೆ

NAAC Accredited-B+

Ref No. RLLC/ / 2026-27

Date: - 09.04.2026

ಇವರಿಗೆ,
ಮುಖ್ಯ ಅಧೀಕ್ಷಕರು,
ಹಿಂಡಲಗಾ ಕೇಂದ್ರ ಕಾರಾಗೃಹ
ಬೆಳಗಾವಿ–591 108

ಮಾನ್ಯರೆ,

**ವಿಷಯ:** ನಮ್ಮ ಕಾಲೇಜಿನ ವಿದ್ಯಾರ್ಥಿಗಳಿಗೆ ಬೆಳಗಾವಿಯ ಹಿಂಡಲಗಾ ಕೇಂದ್ರ ಕಾರಾಗೃಹಕ್ಕೆ ಶೈಕ್ಷಣಿಕ ಚಟುವಟಿಕೆಯ ಭಾಗವಾಗಿ ದಿನಾಂಕ 25.04.2026 ರಂದು ಭೇಟಿ ನೀಡಲು ಅನುಮತಿ ನೀಡುವ ಕುರಿತು

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಮ್ಮ ಕಾಲೇಜಿನ ಕಾನೂನು ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಚಟುವಟಿಕೆಯ ಭಾಗವಾಗಿ ಬೆಳಗಾವಿಯ ಹಿಂಡಲಗಾ ಕೇಂದ್ರ ಕಾರಾಗೃಹಕ್ಕೆ ದಿನಾಂಕ 25.04.2026 ಶನಿವಾರದಂದು ಭೇಟಿ ನೀಡಲು ಉದ್ದೇಶಿಸಿದ್ದು, ತಾವುಗಳು ದಯಮಾಡಿ ಅನುಮತಿ ನೀಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಪ್ರಾಂಶುಪಾಲರು
ಆರ್.ಎಲ್.ಕಾನೂನು ಕಾಲೇಜು
ದಾವಣಗೆರೆ.

Recieved
12:45
25/04/2026
ದ್ವಾರಪಾಲಕರು
ಕೇಂದ್ರ ಕಾರಾಗೃಹ, ಬೆಳಗಾವಿ

---

ಕರ್ನಾಟಕ ಸರ್ಕಾರ
(ಕಾರಾಗೃಹ ಮತ್ತು ಸುಧಾರಣಾ ಸೇವೆಗಳು)

ಸಂಖ್ಯೆ:ಕೇಕಾಬೆ/ಕಾನಿವಿ/ಸಿಆರ್.V/ /2025-26

ಮುಖ್ಯ ಅಧೀಕ್ಷಕರವರ ಕಛೇರಿ
ಕಾರಾಗೃಹ ಮತ್ತು ಸುಧಾರಣಾ ಸೇವೆ
ಕೇಂದ್ರ ಕಾರಾಗೃಹ ಬೆಳಗಾವಿ-591108
ದಿನಾಂಕ:24-04-2026

ಪ್ರಾಚಾರ್ಯರು,
ಆರ್.ಎಲ್ ಕಾನೂನು ಮಹಾವಿದ್ಯಾಲಯ,
ದಾವಣಗೆರೆ.

**ವಿಷಯ:** ಬೆಳಗಾವಿ ಕೇಂದ್ರ ಕಾರಾಗೃಹಕ್ಕೆ ಭೇಟಿ ನೀಡುವ ಬಗ್ಗೆ ಅನುಮತಿಸಿರುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಆರ್.ಎಲ್ ಕಾನೂನು ಮಹಾವಿದ್ಯಾಲಯ ವಿದ್ಯಾರ್ಥಿಗಳಿಗಾಗಿ ಬೆಳಗಾವಿ ಕೇಂದ್ರ ಕಾರಾಗೃಹದ ಮೇಲೆ ಅಧ್ಯಯನ ಮಾಡಲು ವಿದ್ಯಾರ್ಥಿಗಳನ್ನು ಹಾಗೂ ಬೋಧಕರು ರವರುಗಳನ್ನು ಕಾರಾಗೃಹಕ್ಕೆ ಭೇಟಿ ನೀಡಲು ಅನುಮತಿಗಾಗಿ ತಮ್ಮ ಸಂಸ್ಥೆಯ ಪತ್ರದ ಮೂಲಕ ವಿನಂತಿಸಿದ್ದು ಇರುತ್ತದೆ.

ಮುಂದುವರೆದು, ವಿನಂತಿ ಮೇರೆಗೆ ತಮ್ಮ ಕಾಲೇಜಿನ 100 ಸಂಖ್ಯೆಯ ವಿದ್ಯಾರ್ಥಿಗಳನ್ನು ಹಾಗೂ 02 ಸಂಖ್ಯೆಯ ಬೋಧಕರು ರವರುಗಳನ್ನು ದಿನಾಂಕ: 25-04-2026 ರಂದು ಕಾರಾಗೃಹಕ್ಕೆ ಭೇಟಿ ನೀಡಲು ಅನುಮತಿ ನೀಡಲಾಗಿದೆ. ಕಾರಾಗೃಹದ ಭೇಟಿ ಸಮಯದಲ್ಲಿ ಈ ಕೆಳಕಂಡ ನಿಯಮಗಳನ್ನು ಪಾಲಿಸಲು ಸೂಚಿಸಿದೆ.

- ಕಾರಾಗೃಹಕ್ಕೆ ಭೇಟಿ ನೀಡುವ ಸಮಯದಲ್ಲಿ ಎಲ್ಲಾ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳು ಕಡ್ಡಾಯವಾಗಿ ಕಾಲೇಜು ಸಮವಸ್ತ್ರ ಹಾಗೂ ಐ.ಡಿ ಕಾರ್ಡಗಳನ್ನು ಧರಿಸತಕ್ಕದ್ದು.
- ಕಾರಾಗೃಹದ ಒಳಗಡೆ ಪ್ರವೇಶಿಸುವ ಮುನ್ನ ವಿದ್ಯಾರ್ಥಿಗಳ ಮತ್ತು ಸಿಬ್ಬಂದಿಗಳ ಎಲೆಕ್ಟ್ರಾನಿಕ್ ಉಪಕರಣಗಳಾದ ವಾಚ್, ಮೊಬೈಲ್, ಇಯರ್ ಫೋನ್ ಇತ್ಯಾದಿಗಳನ್ನು ವಾಹನದಲ್ಲಿಯೇ ಬಿಟ್ಟುಬರಲು ತಿಳಿಸಿದೆ.
- ಕಾರಾಗೃಹದ ಒಳಗಡೆ ಪ್ರವೇಶಿಸುವ ಮುನ್ನ ಎಲ್ಲಾ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳು ಕಡ್ಡಾಯವಾಗಿ ಕೆ.ಎಸ್.ಐ.ಎಸ್.ಎಫ್ ಘಟಕದಿಂದ ತಪಾಸಣೆಗೆ ಒಳಪಟ್ಟು ಪ್ರವೇಶಿಸತಕ್ಕದ್ದು.
- ಕಾರಾಗೃಹ ಭೇಟಿ ಸಮಯದಲ್ಲಿ ಶಿಸ್ತು ಪಾಲನೆಯನ್ನು ಕೈಗೊಳ್ಳತಕ್ಕದ್ದು.
- ಕಾರಾಗೃಹ ಭೇಟಿ ಸಮಯದಲ್ಲಿ ಬಂದಿಗಳೊಂದಿಗೆ ಮಾತನಾಡುವುದಾಗಲಿ ಅವರ ಜೊತೆ ನಿಂತು ಕಾರಾಗೃಹದ ಬಗ್ಗೆ ಮಾಹಿತಿಗಳನ್ನು ಪಡೆಯುವುದನ್ನು ಮಾಡಬಾರದು.
- ಕಾರಾಗೃಹದ ಭೇಟಿಗೆ ಬರುವ ವಾಹನವನ್ನು ಕಾರಾಗೃಹದ ಮುಂಭಾಗದ ಜಾಗದಲ್ಲಿ ಪಾರ್ಕ್ ಮಾಡಬಾರದು.
- ಕಾರಾಗೃಹಕ್ಕೆ ಭೇಟಿ ನೀಡುವ ಎಲ್ಲಾ ವಿದ್ಯಾರ್ಥಿಗಳ ಮತ್ತು ಸಿಬ್ಬಂದಿಗಳ ಹೆಸರುಗಳ ಪಟ್ಟಿಯನ್ನು ತೆಗೆದುಕೊಂಡು ಬರತಕ್ಕದ್ದು.
- ಕಾರಾಗೃಹದ ಮುಂದೆ ಜೇನು ನೊಣಗಳಿರುವುದರಿಂದ ಯಾವುದೇ ವಿದ್ಯಾರ್ಥಿಗಳಾಗಲಿ, ಸಿಬ್ಬಂದಿಗಳಾಗಲಿ ಸುಗಂಧ ದ್ರವ್ಯ ಬಳಸಿ ಕಾರಾಗೃಹ ಪ್ರವೇಶಿಸಬಾರದು.

ತಮ್ಮ ವಿಶ್ವಾಸಿ

(ಮಲ್ಲಿಕಾರ್ಜುನ ಕೊಣ್ಣೂರ)
ಮುಖ್ಯ ಅಧೀಕ್ಷಕರು (ಪ್ರ)
ಕೇಂದ್ರ ಕಾರಾಗೃಹ, ಬೆಳಗಾವಿ.

ಪ್ರತಿಯನ್ನು:
ಆರಕ್ಷಕ ನಿರೀಕ್ಷಕರು, ಕೆ.ಎಸ್.ಐ.ಎಸ್.ಎಫ್ ಕೇಂದ್ರ ಕಾರಾಗೃಹ ಬೆಳಗಾವಿ ರವರಿಗೆ ಮುಂದಿನ ಕ್ರಮಕ್ಕಾಗಿ.

Received
12:45
ದ್ವಾರಪಾಲಕರು
ಕೇಂದ್ರ ಕಾರಾಗೃಹ, ಬೆಳಗಾವಿ

PHOTOS OF PRISON VISIT







